

ತಮ್ಮ ವಾಹನದ ಮುಂದೆ ಆಯೂಬ್ ಅಹ್ಮದ್

‘ಕೋವಿಡ್‌ನಿಂದ ಮೃತರಾದ ತಮ್ಮ ಹೆತ್ತವರ ಮುಖ ನೋಡಲು, ಅಂತ್ಯಸಂಸ್ಕಾರ ಸ್ಥಳಕ್ಕೆ ಬರಲು ಸ್ವತಃ ಮಕ್ಕಳು ಹಿಂದೇಟು ಹಾಕಿದರು. ಅಂಥವರ ಹೆಣ ಎತ್ತಿ ನಾನೇ ಅಂತ್ಯಸಂಸ್ಕಾರ ಮಾಡಿದೆ. ನಮಗೆ ಸಿಕ್ಕ ಸ್ಥಾನಮಾನ, ಪ್ರಶಸ್ತಿ, ಸನ್ಮಾನ, ಸಂಪಾದಿಸಿದ ಆಸ್ತಿ ಎಲ್ಲವೂ ವೇಸ್ಟ್. ಒಂದು ದಿನ ಇವೆಲ್ಲವನ್ನು ಬಿಟ್ಟು ಹೋಗಬೇಕಾಗುತ್ತದೆ. ಕೊನೆಗೆ ಉಳಿಯುವುದು ನಾನು ಮಾಡಿದ ಒಳ್ಳೆಯ ಕೆಲಸ ಹಾಗೂ ಮನುಷ್ಯತ್ವ’. ಹೀಗೆಂದು ಹೇಳುತ್ತಾ ಭಾವುಕರಾದರು ‘ಬಾಡಿ ಮಿಯಾ’ ಖ್ಯಾತಿಯ ಆಯೂಬ್ ಅಹ್ಮದ್.

ಅಂದಹಾಗೆ, 10 ಸಾವಿರಕ್ಕೂ ಹೆಚ್ಚು ಅನಾಥ ಹಾಗೂ ಅಪರಿಚಿತ ಶವಗಳನ್ನು ಸಾಗಿಸಿ ಅಂತ್ಯಸಂಸ್ಕಾರ ನಡೆಸಿರುವ ಕ್ರೆಡಿಟ್ 40 ವರ್ಷ ವಯಸ್ಸಿನ ಈ ವ್ಯಕ್ತಿಯ ಹೆಸರಿನಲ್ಲಿದೆ. ಮೈಸೂರು ನಗರ ಹಾಗೂ ಸುತ್ತಮುತ್ತ ಹಳ್ಳಿಗಳ ಪ್ರತಿ ಸ್ಮಶಾನಗಳಲ್ಲಿ ಇವರ ಬೆವರ ಹನಿಗಳು ಹಿಂಗಿವೆ.

21 ವರ್ಷಗಳಿಂದ ಕರ್ತವ್ಯ, ಸೇವೆಯಂತೆ ಪರಿಗಣಿಸಿ ಶವ ಸಂಸ್ಕಾರ ಕಾರ್ಯದಲ್ಲಿ ತೊಡಗಿರುವರ ಇವರಿಗೆ ಮೈಸೂರು ಜಿಲ್ಲಾಡಳಿತವು ಈ ಬಾರಿಯ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ ಸಲ್ಲಿಸಿದೆ.

ಕಳೆದ ಎಳೆಂಟು ತಿಂಗಳಲ್ಲಿ ಕೋವಿಡ್‌ನಿಂದ ಮೃತರಾದ ಸುಮಾರು 100 ವ್ಯಕ್ತಿಗಳಿಗೆ ಒಬ್ಬ ತಂದೆಯಾಗಿ, ಮಗನಾಗಿ, ಸಹೋದರನಾಗಿ ಆಯೂಬ್ ಅಂತ್ಯಸಂಸ್ಕಾರ ನಡೆಸಿದ್ದಾರೆ. ಅವರು ಸಂಸ್ಕಾರ ಮಾಡಿದವರಲ್ಲಿ ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಇದ್ದಾರೆ. ಸ್ವಂತ ವಾಹನದಲ್ಲಿ ಪಿಪಿಇ ಕಿಟ್ ಧರಿಸಿ ದೇಹಗಳನ್ನು ಸಾಗಿಸಿ, ಕಣ್ಣೀರು ಸುರಿಸುತ್ತಲೇ ಮಣ್ಣು ಮಾಡಿ ಗೌರವ ಸಲ್ಲಿಸಿದ್ದಾರೆ. ಕೆಲವರನ್ನು ವಿದ್ಯುತ್ ಚಿತಾಗಾರದಲ್ಲಿಟ್ಟು ಕೈಮುಗಿದಿದ್ದಾರೆ. ಮೊದಲು ಅಂಬಾಸಿಡರ್ ಕಾರಿನಲ್ಲಿ, ಈಗ ಮಾರುತಿ ಓಮ್ನಿ ಕಾರಿನಲ್ಲಿ ಅನಾಥ ಶವ ಸಾಗಣೆ ಕಾರ್ಯ ಮುಂದುವರಿಸಿದ್ದಾರೆ.

‘ಬಾಡಿಗೆ ಮನೆಯಲ್ಲಿ ಇರುವವರನ್ನು ಸ್ವಂತ ಮನೆಗೆ ಕಳಿಸಲು ಸೇತುವೆಯಾಗಿ ಕೆಲಸ ಮಾಡುತ್ತಿದ್ದೇನೆ’ ಎಂದು ಆಯೂಬ್ ಹೇಳುತ್ತಾರೆ. ದಣಿವರಿಯದ ಕಾಯಕದ ಬಗ್ಗೆ ಆಯೂಬ್‌ರೊಂದಿಗೆ ‘ಸುಧಾ’ಕ್ಕಾಗಿ ನಡೆಸಿದ ಕಿರು ಸಂದರ್ಶನ ಇಲ್ಲಿದೆ.

◆ **ಈ ಕೆಲಸಕ್ಕೆ ಬರಬೇಕು ಅನಿಸಿದ್ದು ಏಕೆ?**

ಅನಾಥ ಶವ ಸಾಗಿಸಲು ಎಷ್ಟು ಮಂದಿ ಮುಂದೆ ಬರುತ್ತಾರೆ ಹೇಳಿ? ರೈಲು ನಿಲ್ದಾಣಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಮೃತದೇಹಗಳು ಅನಾಥವಾಗಿ ಗಂಟೆಗಟ್ಟಲೆ ಬಿದ್ದಿದ್ದರೂ ತಿರುಗಿ ನೋಡದ ಜನ ಇದ್ದಾರೆ. ಇಂಥ ಹಲವು ಘಟನೆಗಳನ್ನು ಕಂಡ ಮೇಲೆ ಈ ಕೆಲಸಕ್ಕೆ ಇಳಿದೆ. ಮೈಸೂರಿನಿಂದ ಗುಂಡ್ಲುಪೇಟೆಗೆ ಹೋಗುವಾಗ ರಸ್ತೆಯಲ್ಲಿ ವ್ಯಕ್ತಿಯೊಬ್ಬರು ಮೃತರಾಗಿದ್ದರು. ವಾಪಸ್ ಬರುವಾಗಲೂ ಅನಾಥ ಶವ ಅಲ್ಲೇ ಬಿದ್ದಿತ್ತು. ಆಗ ನಾನೇ ಎತ್ತಿಕೊಂಡು ಹೋಗಿ ಅಂತಿಮ ಸಂಸ್ಕಾರ ಮಾಡಿದೆ. ಆಗ ನನಗೆ 19 ವರ್ಷ.

ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಸಹಾಯಕ್ಕೆ ಬಾರದಿದ್ದರೆ ಮನುಷ್ಯತ್ವಕ್ಕೆ ಮಸಿ ಬಳಿದಂತೆ. ಹಿಂದೆ ಎಡವಿ ಬಿದ್ದರೂ ನೀರು ಕುಡಿಸಲು ಜನ ಮುಂದೆ ಬರುತ್ತಿದ್ದರು. ಈಗ ಶವ ಬಿದ್ದಿದ್ದರೆ ಕೊರಳಿನಲ್ಲಿ, ಜೇಬಿನಲ್ಲಿ ಏನಾದರೂ ಇದೆಯಾ ಎಂದು ನೋಡುತ್ತಾರೆ. ಯಾರೂ ಮಾಡದ ಕೆಲಸನ್ನು ಮಾಡುತ್ತಿದ್ದೇನೆ ಎಂಬ ಹೆಮ್ಮೆ ನನಗಿದೆ.

◆ **ಶವ ಸಾಗಿಸುವಾಗ ನಿಮ್ಮ ಮನಸ್ಸಿನ ತೊಳಲಾಟ ಹೇಗಿರುತ್ತದೆ?**

ಇಂಥ ಶವ ಮತ್ತೆ ನನಗೆ ಸಿಗದಿರಲಿ ಎಂದು ಅಲ್ಲಾಹುವಿನಲ್ಲಿ ಪ್ರಾರ್ಥಿಸುತ್ತೇನೆ. ಆ ಸ್ಥಾನದಲ್ಲಿ ನಾನು ಅಥವಾ ಸಂಬಂಧಿಕರ್‍ಯಾರೋ ಇದ್ದರೆ ಹೀಗೆ ಆಗುತ್ತಿತ್ತಲ್ಲವೇ ಅನಿಸುತ್ತದೆ. ಮೊದಲು ಕಣ್ಣೀರಿಡುತ್ತಿದ್ದೆ. ಈಗ ಅಭ್ಯಾಸವಾಗಿದೆ ಅಷ್ಟೆ.

◆ **ಈ ಹಾದಿಯಲ್ಲಿ ತುಂಬಾ ನೋವು ನೀಡಿದ ಘಟನೆ ಯಾವುದು?**

ಕೆಆರ್‌ಎಸ್ ಹಿನ್ನೀರಿನಲ್ಲಿ ಹೆಣ ಬಿದ್ದರೆ ಮೇಲೆತ್ತಲು ಈಜು ಪರಿಣತರು ₹ 3ರಿಂದ 5 ಸಾವಿರ ಕೇಳುತ್ತಾರೆ. ಒಮ್ಮೆ 24 ವರ್ಷದ ಯುವಕನೊಬ್ಬ ಕುರಿ ಮೇಯಿಸುವ ವೇಳೆ ಹಿನ್ನೀರಿನಲ್ಲಿ ಬಿದ್ದು ಸತ್ತು ಹೋದ. ಆ ಯುವಕನ ತಂದೆ ಬಡವರು, ಅವರಿಗೆ ವಯಸಾಗಿತ್ತು. ಆ ಸಮಯದಲ್ಲಿ ನನಗೆ ಪೊಲೀಸರು ಕರೆ ಮಾಡಿದರು. ಶವವನ್ನು ಎತ್ತಿಕೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ತಂದೆವು. ಆ ತಾತಪ್ಪ ನನಗೆ ₹ 500 ನೀಡಿದರು. ಅಲ್ಲಿಂದ ಅಂತಿಮ ಸಂಸ್ಕಾರ ಮಾಡಲು ಹೊರಟೆವು. ಆದರೆ, ಅದಕ್ಕೆ ತಾತಪ್ಪನ ಬಳಿ ಹಣವೇ ಇರಲಿಲ್ಲ. ನನಗೆ ಕಣ್ಣೀರು ಬಂತು. ಆಗ ಅವರು ನೀಡಿದ್ದ ₹ 500ರ ಜೊತೆಗೆ ಮತ್ತೆ ₹ 3 ಸಾವಿರ ಸೇರಿಸಿ ನೀಡಿದೆ. ಅಂತಿಮ ಸಂಸ್ಕಾರ ಮಾಡಲೂ ಹಣ ಇಲ್ಲದವರನ್ನು ನೋಡಿದ್ದೇನೆ. ಆಗ ನಾನೇ ಬಟ್ಟೆ, ಪೂಜಾ ಸಾಮಗ್ರಿ ಖರೀದಿಸಿ ಕೊಟ್ಟಿದ್ದುಂಟು.

◆ **ಬೇರೆ ಇನ್ಯಾವ ಕೆಲಸ ಮಾಡುವಿರಿ?**

ರೈಲ್ವೆ ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಭಿಕ್ಷೆಯಲ್ಲಿ ತೊಡಗಿರುವವರಿಗೆ ಬಟ್ಟೆ, ನಿತ್ಯ ಆಹಾರ ಒದಗಿಸುತ್ತೇನೆ. ಪತ್ನಿಯು ಭಿಕ್ಷೆ ಬೇಡುವವರಿಗೆ ಟೈಲರಿಂಗ್ ತರಬೇತಿ ನೀಡುತ್ತಾರೆ. ಹಳೆಯ ಹೊಲಿಗೆ ಯಂತ್ರಗಳನ್ನು ನೀಡಿ ಭಿಕ್ಷುಕರನ್ನು ಸ್ವಾವಲಂಬಿಗಳಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಇನ್‌ಸಾನಿಯಾತ್ (ಮನುಷ್ಯತ್ವ) ಚಾರಿಟೆಬಲ್ ಟ್ರಸ್ಟ್ ಮಾಡಿಕೊಂಡು ವೃದ್ಧ ಅನಾಥರಿಗೆ ಆಶ್ರಯ ನೀಡಿದ್ದೇನೆ.

◆ **ಇಷ್ಟೆಲ್ಲಾ ಕೆಲಸ ಮಾಡುವ ನೀವು ಏನಾದರೂ ಸವಲತ್ತು ಕೋರಿ ಸರ್ಕಾರಕ್ಕೆ ಮನವಿ ಮಾಡಿಲ್ಲವೇ?**

ಪ್ರತಿಯೊಬ್ಬರಿಗೆ ಬದುಕು ಇದೆ. ಬೆಳಿಗ್ಗೆ ಎದ್ದ ಕೂಡಲೇ ಇವತ್ತು ಎಷ್ಟು ಸಂಪಾದಿಸಬಹುದು ಎಂಬ ಯೋಚನೆ ಶುರುವಾಗುತ್ತದೆ. ಅದು ಸಹಜ. ಆದರೆ, ‘ಶವ ಬಿದ್ದಿದೆ ತೆಗೆದುಕೊಂಡು ಹೋಗು’ ಎಂಬ ಕರೆ ಪೊಲೀಸರು, ಸಾರ್ವಜನಿಕರಿಂದ ನನಗೆ ಬರುತ್ತದೆ. ನನಗೇನೂ ಆಸ್ತಿ ಬೇಡ. ಈಗಲೂ ಬಾಡಿಗೆ ಮನೆಯಲ್ಲಿದ್ದೇನೆ. ಒಂದು ಆಂಬುಲೆನ್ಸ್ ಕೊಟ್ಟರೆ ಮತ್ತಷ್ಟು ದಿನ ಉಚಿತವಾಗಿ ಅನಾಥ ಶವ ಸಾಗಿಸುತ್ತೇನೆ.

◆ **ನಿಮ್ಮ ಆದಾಯದ ಮೂಲ ಯಾವುದು?**

ಬಿಡುವಿನ ವೇಳೆ ಆಟೊ ಓಡಿಸುತ್ತೇನೆ. ಲಾರಿಗಳಿಗೆ ಹಣ್ಣು ಭರ್ತಿ ಮಾಡುವುದು, ಇಳಿಸುವ ಕೆಲಸ ಮಾಡುತ್ತೇನೆ. ಅನಾಥ ಶವ ಸಾಗಿಸಿದಾಗ ಪೊಲೀಸರು ಒಂದಿಷ್ಟು ಹಣ ಕೊಡುತ್ತಾರೆ. ಸತ್ತವರ ಕುಟುಂಬದವರು ತಮ್ಮ ಬಳಿ ಇದ್ದರೆ ಪ್ರೀತಿಯಿಂದ ₹ 100, 200 ಕೊಡುತ್ತಾರೆ.

◆ **ಕೋವಿಡ್ ಕಾಲದಲ್ಲಿ ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದೀರಿ?**

ನನಗೂ ಇಬ್ಬರು ಚಿಕ್ಕ ಹೆಣ್ಣುಮಕ್ಕಳು ಇದ್ದಾರೆ. ಅವರ ರಕ್ಷಣೆಯೂ ಮುಖ್ಯ. ಆದರೆ, ಇಷ್ಟು ವರ್ಷಗಳಿಂದ ಅನಾಥ ಶವಗಳನ್ನು ಸಾಗಿಸುತ್ತಿರುವ ನಾನು ಕೋವಿಡ್ ಕಾಲದಲ್ಲಿ ಸುಮ್ಮನಿದ್ದರೆ ಹೇಗೆ? ಈವರೆಗಿನ ಅಷ್ಟು ಕೆಲಸವೂ ವ್ಯರ್ಥವಾಗುತ್ತದೆ. ಹೀಗಾಗಿ, ಪಿಪಿಇ ಕಿಟ್ ಧರಿಸಿ ಏಳೆಂಟು ತಿಂಗಳಿನಿಂದ ಈ ಕೆಲಸದಲ್ಲಿ ತೊಡಗಿದ್ದೇನೆ. ಆಸ್ಪತ್ರೆ, ಮನೆಗಳಿಂದ ನಾನೇ ಕೋವಿಡ್ ರೋಗಿಗಳನ್ನು ಸಾಗಿಸುತ್ತೇನೆ, ಅವರನ್ನು ಹೂಳಲು ಸಹಾಯ ಮಾಡುತ್ತೇನೆ.

ಪ್ರತಿಕ್ರಿಯಿಸಿ: feedback@sudha.co.in